

ಕಲೀಂ ಉಲ್ಲಾ

# ಬದುಕಿದ್ದಾಗಲೇ ಶ್ರದ್ಧಾಂಜಲಿ ಸಭೆ

ನಮ್ಮ ಅಧ್ಯಾಪಕ ವೃತ್ತಿಯಲ್ಲಿ ಮೌಲ್ಯಮಾಪನ ಕೆಲಸ ತುಂಬ ಬೋರ್ ಹೊಡೆಸುತ್ತದೆ. ಎಷ್ಟೋ ಸಮಯದಲ್ಲಿ ಫೇಲಾಗುವ ಹುಡುಗರೇ ನಮಗೆ ಖುಷಿ ಕೊಡುತ್ತಾರೆ. ತುಂಬ ಬುದ್ಧಿವಂತರ ಉತ್ತರ ಪತ್ರಿಕೆ ಒಂದು ರೀತಿ ಇರುತ್ತದೆ. ಒಳ್ಳೆಯ ಅಂಕ ತೆಗೆಯುವ ಮಕ್ಕಳು ಸಾಧಾರಣವಾಗಿ ಒಂದೇ ರೀತಿಯಲ್ಲಿ ಇರುತ್ತವೆ. ಅದನ್ನು ಓದಿ ಓದಿ ನಮಗೂ ಸಿಕ್ಕಾಪಟ್ಟೆ ಬೇಸರ ಅನ್ನಿಸುತ್ತದೆ. ಎಲ್ಲ ಉತ್ತರ ಪತ್ರಿಕೆಯಲ್ಲೂ ಅದೇ ಅದೇ ಉತ್ತರಗಳಿರುತ್ತವೆ. ಸರಿಯಾಗಿ ಕಾಲೇಜಿಗೆ ಬರದ ಮಕ್ಕಳ ಉತ್ತರ ಪತ್ರಿಕೆಗಳು ಬೇರೆಯ ದಿಕ್ಕನ್ನೇ ತೋರಿಸುತ್ತವೆ. ಅಡ್ಡಾದಿಡ್ಡಿ ಉತ್ತರ ಬರೆದಿದ್ದರೂ ಕೆಲವು ಮಜವಾಗಿರುತ್ತವೆ.

ಪ್ರಶ್ನೆಪತ್ರಿಕೆಯನ್ನು ತೆಗೆದುಕೊಂಡು ಅದರಲ್ಲಿ ಇರುವ ಪ್ರಶ್ನೆಯನ್ನೇ ಉತ್ತರ ರೂಪದಲ್ಲಿ ವಿನ್ಯಾಸ ಮಾಡುವ ಕಲೆ ಅವರಿಗೆ ಸಿದ್ಧಿಸಿರುತ್ತದೆ.

ಪಂಪ ಹೇಳುವ ಎರಡು ಗುಣಗಳು ಯಾವುದು? ಎಂದು ಪ್ರಶ್ನೆ ಕೇಳಿರುತ್ತಾರೆ. ಸಾರಾ ಅಬೂಬಕ್ಕರ್ ಕುರಿತು ಮತ್ತೊಂದು ಪ್ರಶ್ನೆ ಇರುತ್ತದೆ. ಆಗ ಸಾರಾ ಅಬೂಬಕರ್ ಹೇಳುವಂತೆ ಅವಳ ಚಿಕ್ಕಪ್ಪನ ಮಗ ಪಂಪ ಎಂದು ಬರೆದಿರುತ್ತಾರೆ. ಅಬೂಬಕ್ಕರ್ ಕಥೆಯ ಪ್ರಶ್ನೆಗೆ, ಜಂಬಣ್ಣ ಅಮರಚಿಂತ ಅವರ ಕಥೆಗೆ ಉತ್ತರವನ್ನು ಬರೆದಿರುತ್ತಾರೆ.

ಜೈನ ಧರ್ಮದ ಬಗ್ಗೆ ಕೇಳಿದರೆ ರಾಮಾಯಣ–ಮಹಾಭಾರತದ ಬಗ್ಗೆ ಬರೆದಿರುತ್ತಾರೆ. ದ್ರೌಪದಿ ಭೀಮನನ್ನು ಹೇಗೆ ಎಬ್ಬಿಸಿದಳು? ಎಂದು ಕೇಳಿದ ಪ್ರಶ್ನೆಗೆ ಒಬ್ಬ ಸಖತ್ತಾಗಿ ಉತ್ತರ ಬರೆದಿದ್ದ.

'ಮುಸುಕನ್ನು ಸರಿಸಿ ಮೆಲ್ಲಗೆ ಅಲುಗಾಡಿಸಿ ಎಬ್ಬಿಸಿದಳು' ಎಂದು ಉತ್ತರಿಸಬೇಕು. ಪಾಠ ಕೇಳದ ಅವನು 'ದ್ರೌಪದಿ, ಭೀಮನನ್ನು ಕೂಗಿ ಕೂಗಿ ಎಬ್ಬಿಸಿದಳು. ಅವನು ಏಳದಿದ್ದಾಗ ಮುಖದ ಮೇಲೆ ನೀರು ಚುಮುಕಿಸಿದಳು' ಎಂದು ತನ್ನ ಸ್ವ ಅನುಭವವನ್ನು ಹಂಚಿಕೊಂಡಿದ್ದ.

ದ್ರೌಪದಿಯ ಇಷ್ಟವಾದ ಗಂಡ ಯಾರು? ಎಂದು ಕೇಳಿದರೆ, ಅದನ್ನು ಕವಿ 'ಸತ್ಯಾನಂದ ಪಾತ್ರೋಟ' ಅವರಿಗೆ ಕಟ್ಟಿ ಉತ್ತರಿಸಿರುತ್ತಾರೆ. ಒಟ್ಟಾರೆ ಕನ್ನಡ ಭಾಷಾ ಪತ್ರಿಕೆಯಲ್ಲಿ ಸಾಹಿತ್ಯವನ್ನು ಚೆನ್ನಾಗಿ ಕಲಸಿಹಾಕಿರುತ್ತಾರೆ.

ಅದೇ ಇತಿಹಾಸ ಪತ್ರಿಕೆ ಇನ್ನೊಂದು ಆಯಾಮ ಇರುತ್ತದೆ. ಅಲ್ಲಿ ವ್ಯಾಕರಣ ಅಕ್ಷರ ದೋಷಕ್ಕಿಂತ ಹೆಚ್ಚು ಬರೆಯಬೇಕಾಗಿರುತ್ತದೆ. ಅಲ್ಲಿ ಶಬ್ದಗಳನ್ನೇ ಆಯ್ದುಕೊಂಡು ಪುಟಗಳನ್ನು ತುಂಬಿಸಿ ಪೇಜಿಗೆ ಒಂದೊಂದು ಅಂಕ ಕೊಟ್ಟರೂ ಪಾಸ್ ಎಂದು ಹೇಳುವ ಮಕ್ಕಳಿದ್ದಾರೆ.

ಅಶೋಕನು ಯುದ್ಧವನ್ನು ಹೇಗೆ ಮಾಡಿದನು ವಿವರಿಸಿ ಎನ್ನುವ ಐದು ಅಂಕದ ಪ್ರಶ್ನೆಗೆ ಒಬ್ಬ ವಿದ್ಯಾರ್ಥಿ ಒಂದು ಪುಟದಷ್ಟು ಯುದ್ಧದ ವಿವರವನ್ನು ಹೀಗೆ ಬರೆದಿದ್ದ: ಅಶೋಕನು ತುಂಬ ಯುದ್ಧಗಳನ್ನು ಮಾಡಿದನು. ಅವನು ತುಂಬ ಯುದ್ಧಗಳನ್ನು ಮಾಡಿದ್ದರಿಂದ ತುಂಬ ಯುದ್ಧಗಳು ಆದವು. ಅಶೋಕನು ಯುದ್ಧಗಳನ್ನು ಮಾಡುತ್ತಿದ್ದರಿಂದ ಯುದ್ಧಗಳು ಆಗುತ್ತಿದ್ದವು. ಹೀಗೆ ಯುದ್ಧಗಳು ಆಗುವ ಸಂದರ್ಭದಲ್ಲಿ ದೊಡ್ಡದಾಗಿ ನಡೆಯುತ್ತಿದ್ದವು. ಇಬ್ಬರ ನಡುವೆ ನಡೆಯುತ್ತಿದ್ದ ಯುದ್ಧಗಳು ಕೆಲವೊಮ್ಮೆ ಮೂವರ ನಡುವೆಯೂ ನಡೆಯುತ್ತಿದ್ದವು. ಹೀಗೆ ಯುದ್ಧಗಳು ನಡೆಯುತ್ತಿದ್ದವು.

ವಿಶೇಷವಾಗಿ ಅಶೋಕನು ಹೇಗೆ ಯುದ್ಧವನ್ನು ಮಾಡಿದನು ಅಂದರೆ, ಅವನು ಅನೇಕ ಕಡೆ ಹೋದಾಗ ಯುದ್ಧಗಳಾದವು. ಅವನಿಗೆ ಯುದ್ಧ ಎಂದರೆ ತುಂಬ ಇಷ್ಟ. ಅನೇಕ ಯುದ್ಧಗಳನ್ನು ನೋಡಿದ್ದರಿಂದಲೂ ಯುದ್ಧಗಳಾದವು. ಯುದ್ಧಗಳು ಆಗಾಗ ನಡೆಯುತ್ತಿರುತ್ತವೆ. ಯುದ್ಧಗಳೆಂದರೆ ಅವರ ಮನೆಯವರಿಗೂ ಇಷ್ಟ ಹಾಗಾಗಿ ಅನೇಕ ಸಾರಿ ಯುದ್ಧಗಳಾಗುತ್ತಿದ್ದವು. ಯುದ್ಧಗಳನ್ನು ಮನೆಗೆ ತರುತ್ತಿದ್ದನು ಅವುಗಳನ್ನು ಸಾಕುತ್ತಿದ್ದನು ಎಂದು ಎಳೆದು ಬರೆದಿದ್ದ.

***

ಯಾವಾಗಲೋ ಒಮ್ಮೆ ದಿನ ಪತ್ರಿಕೆಯಲ್ಲಿ 'ರಸ್ತೆ ಅಪಘಾತದಲ್ಲಿ ಕಲೀಂ ಉಲ್ಲಾ ಸಾವು' ಎನ್ನುವ ಸುದ್ದಿ ಪ್ರಕಟವಾಗಿದೆ. ಹೊಳಲ್ಕೆರೆಯಲ್ಲಿ ನನ್ನ ಗೆಳೆಯ ಆ ಸುದ್ದಿ ನೋಡಿದ್ದಾನೆ. ನಾವಿಬ್ಬರು ಅಕ್ಕಪಕ್ಕದಲ್ಲಿ ರೂಮು ಮಾಡಿಕೊಂಡು ಓದುತ್ತಿದ್ದೆವು. ಅಯ್ಯೋ ಪಾಪ ಎಂದು ಲೊಚಗುಟ್ಟುತ್ತಾ ನಮ್ಮ ಜೊತೆ ಓದುತ್ತಿದ್ದ ಆ ಊರಿನ ಇತರ ಸ್ನೇಹಿತರಿಗೂ ತಿಳಿಸಿದ್ದಾನೆ. ಎಲ್ಲರೂ ಆ ದಿನವೇ ಸಭೆ ಸೇರಿದ್ದಾರೆ. ನನ್ನ ಹಳೆಯ ಫೋಟೊವೊಂದನ್ನು ದೊಡ್ಡದಾಗಿ ಪ್ರಿಂಟ್ ಹಾಕಿಸಿ ಅದಕ್ಕೆ ಹಾರ ಹಾಕಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ನನ್ನ ಜೊತೆ ಒಡನಾಟವನ್ನು ಅನುಭವಿಸಿದ ಗೆಳೆಯರೆಲ್ಲ ಅಗಲಿಕೆಯ ದುಃಖ ತೋಡಿಕೊಂಡಿದ್ದಾರೆ. ಸಾಬಿಯಾದರೂ ಕನ್ನಡ ಚೆನ್ನಾಗಿ ಮಾತನಾಡುತ್ತಿದ್ದ. ಊರಿಗೆ ಹೋದರೆ ಒಳ್ಳೆಯ ಅಡುಗೆ ಮಾಡಿ ಊಟ ಬಡಿಸುತ್ತಿದ್ದ ಎನ್ನುವ ವಿಷಯದಿಂದ ತಮ್ಮ ತಮ್ಮ ಭಾವನೆಯ ಕಲೀಂನ ಬಗ್ಗೆ ಹೇಳಿದ್ದಾರೆ.

ಶ್ರದ್ಧಾಂಜಲಿ ಸಭೆ ಏರ್ಪಡಿಸಿದ ಗೆಳೆಯನ ಹೆಸರು ಪ್ರಕಾಶ. ಅವನು ಸ್ವಲ್ಪ ದಿನ ಕಳೆದ ನಂತರ ದಾವಣಗೆರೆಗೆ ಹೋಗಿದ್ದಾನೆ. ಅಲ್ಲಿ ನಮ್ಮಿಬ್ಬರ ಸಹಗೆಳೆಯನನ್ನು ಭೇಟಿಯಾಗಿದ್ದಾನೆ. ಹಳೆಯ ವಿಷಯ ಮಾತನಾಡುತ್ತಾ 'ತುಂಬ ಬೇಜಾರಾಯ್ತು ಕಣೋ, ಕಲೀಂ ಹೋಗಿಬಿಟ್ಟನಂತೆ' ಎಂದು ಹೇಳಿದ್ದಾನೆ.

'ಅವನಿಗೇನಾಗಿದೆಯೋ ಚೆನ್ನಾಗಿಯೇ ಇದ್ದಾನಲ್ಲ. ಮೊನ್ನೆ ಮೊನ್ನೆ ಸಿಕ್ಕಿದ್ದ' ಎಂದಿದ್ದಾನೆ. 'ಇಲ್ಲ ಕಣಲೇ ಹೋಗಿ ಬಿಟ್ನೋ. ಪೇಪರ್‌ನಲ್ಲಿ ಬಂದಿದೆ' ಎಂದು ವಾದ ಮಾಡಿದ್ದಾನೆ. 'ಇಲ್ಲ ಮಾರಾಯ ಮೊನ್ನೆತಾನೆ ಇಲ್ಲಿಗೆ ಬಂದು ಇದ್ದು ನನ್ನ ಜೊತೆ ಊಟ ಮಾಡಿ ಹೋಗಿದ್ದಾನೆ' ಎನ್ನುತ್ತಾನೆ. 'ತಮಾಷೆ ಮಾಡಬೇಡ, ಶ್ರದ್ಧಾಂಜಲಿ ಸಭೆ ಮಾಡಿದ್ದೇವೆ' ಎಂದ. ಅವನು ನನಗೆ ಫೋನ್ ಹಚ್ಚಿಕೊಟ್ಟ. 'ಲೇ ನಾನಲೇ ಪ್ರಕಾಶ. ನೀನೇನ್ಲಾ ಕಲೀಮಾ' ಎಂದ. 'ಹುನ್ಲಾ' ಎಂದೆ. 'ಅಯ್ಯೋ ಅವತ್ತು ಪೇಪರ್‌ನಲ್ಲಿ ಸತ್ತಿದ್ದೀಯಾ ಎಂದು ಬಂದಿತ್ತು. ಸುದ್ದಿ ಓದಿ ದುಃಖ ಆಯ್ತು. ಸಿಕ್ಕಾಪಟ್ಟೆ ಅತ್ತೆ ಕಣೋ... ಸುಮ್ಮನೆ ನನ್ನ ಕಣ್ಣೀರೆಲ್ಲ ವೇಸ್ಟ್ ಆಯ್ತಲ್ಲೋ' ಎಂದ. 'ಏನಾಗಿತ್ತು ನಿನಗೆ' ಎನ್ನುವ ಪ್ರಶ್ನೆಗೆ 'ಏನಾಗಿಲ್ಲ. ಚೆನ್ನಾಗಿದ್ದೇನೆ' ಎಂದೆ. 'ಮತ್ತೆ ಸುದ್ದಿ ಹೇಗೆ ಬಂತು' ಎಂದು ಕುಪಿತನಾದ. 'ನಿನ್ನ ಸಿಟ್ಟು ನಾನು ಸತ್ತಿಲ್ಲ ಎಂದೋ ಅಥವಾ ಪೇಪರ್ ಮೇಲೆ ಪ್ರಕಟ ಆಗಿದ್ದಕ್ಕೋ' ಎಂದ ಗೊಳ್ಳನೆ ನಕ್ಕ.

ಬದುಕಿದ್ದಾಗಲೇ ಶ್ರದ್ಧಾಂಜಲಿ ಸಭೆ ಮಾಡಿಸಿಕೊಂಡಿದ್ದು ಖುಷಿ ಕೊಟ್ಟಿದೆ. 'ಪ್ರಕಾಶ, ಯಾರೇ ಸತ್ತರೂ ಬೇಗ ಶ್ರದ್ಧಾಂಜಲಿ ಸಭೆ ನಡೆಸಬೇಡ ವಿಚಾರಿಸಿ ಮಾಡು ಮಾರಾಯ' ಎಂದೆ. 'ಆದ್ರೂ ನೀನು ನನ್ನ ಕಣ್ಣೀರು ವೇಸ್ಟ್ ಮಾಡಿದೆ' ಎಂದ.



ಕಲೀಂ ಉಲ್ಲಾ ವೃತ್ತಿಯಿಂದ ಪದವಿಪೂರ್ವ ಕಾಲೇಜು ಉಪನ್ಯಾಸಕ, ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ.